# ವಿರಾಮ

ದೇಹಕ್ಕೆ ಚರ್ಮದಂತೆ ಅಂಟಿಕೊಂಡುಬಿಡುತ್ತದೆ
ವಿಷಾದ
ವಿನಾಕಾರಣ ಉಮ್ಮಳಿಸಿಬರುತ್ತದೆ ದುಃಖ
ನೆನಪು ಮಾಡ ಹೊರಟರೆ
ಅನಾದಿ ದೂರ ಕ್ರಮಿಸಬೇಕೇನೋ!!

ಎಚ್ಚರ ಬೋರು ಹೊಡೆಸುತ್ತದೆ!
ಎಷ್ಟೋ ನಡು ಮಧ್ಯಾಹ್ನಗಳಲ್ಲಿ
ರೆಪ್ಪೆಬಾಗಿಲುಗಳು ಗಾಳಿಗೆ ತೊಯ್ದಾಡುವಂತೆ
ಅಪ್ಪಳಿಸುತ್ತದೆ ಜೋಂಪು ನಿದ್ರೆ
ನಿದ್ರೆಯದು ಸಮುದ್ರದ ಹಸಿವು
ಮೆದುಳಿಗೆ ನಶೆಯ ಆಸೆ

ನಿತ್ಯದ ಕಾಣ್ಕೆಯಲ್ಲಿ ನಿಂತ ನೀರಿನ ನಿಶ್ಚಲತೆಯಿದೆ
ಹಾಗಾಗಿ, ನಶೆಯಿರಬೇಕು ಬದುಕಿಗೆ
ನಶೆಯಲ್ಲಿ ಮನುಷ್ಯ ಹದವಾಗುತ್ತಾನೆ
ಸತ್ಯವಾನ್; ಪ್ರೇಮಿ, ಕರುಣಿ, ಉದಾರಿ
ಕೊನೆಗೆ ಸಾಹಸಿ ಕೂಡ!
ಮುಂದುವರೆದು ದೇವರೇ ಆದಾನು!

ಮನುಷ್ಯ
ಬೈಯುತ್ತಲೆ ವಿಷಾದ, ನಿದ್ರೆ ಮತ್ತು ನಶೆಗೆ
ಹಾತೊರೆಯುತ್ತಾನೆ
ನಿತ್ಯವಿರಹಿಯಂತೆ

ರಾತ್ರಿ ಮುಗಿದು ಬೆಳಗು ಬರುತ್ತದೆ
ಇಲ್ಲಿ ಬೆಳಗಿಗೊಂದು ಲಯವಿದೆ
ನಸುನಗುತ್ತಲೆ ಭಯಪಡುತ್ತಾನೆ
ನಿತ್ಯ ಶ್ರುತಿಗೆ
ಅರ್ಥಗಳ ಲಯಕ್ಕೆ
ಅದು ಎಚ್ಚರ ಕೊಡುವ ಲಯ
ಎಚ್ಚರಕ್ಕೊಂದು ಭಾರವಿದೆ
ಭಾರವೇ ಈ ಲೋಕವನ್ನು ನಡೆಸುತ್ತದೆ
ಪ್ರಾರ್ಥನಾ ಮಂದಿರಗಳು ತೆರೆಯುತ್ತವೆ



ಭಾರಹೊರಲು ದೇವರನ್ನು ಒಲೈಸುತ್ತದೆ
ಭಕ್ತಗಣ
ಓಡುತ್ತದೆ; ಓಡಿಯೇ ಓಡುತ್ತದೆ
ಟೆಂಪಲ್ ರನ್; ಹಾಸ್ಪಿಟಲ್ ರನ್; ಸರ್ಕಸ್ ರನ್
ಸುಸ್ತು ಹಿಂದೆಯೇ ಮುತ್ತಿ ಬರುತ್ತದೆ

ಇಲ್ಲಿ ಎಲ್ಲರೂ ಕಾಯುತ್ತಾರೆ
ಗುಟ್ಟಾಗಿ
ನಡುವೆ ಸಿಗುವ ವಿರಾಮಕ್ಕಾಗಿ
ಅಲ್ಲಿ ದಕ್ಕಬಹುದಾದ
ನಶೆ, ನಿದ್ರೆ ಹಾಗೂ ವಿಷಾದಕ್ಕಾಗಿ!!

● **ದಾದಾಪೀರ್ ಜೈಮನ್**

ಕಲೆ: ವಾಗೀಶ ಹೆಗಡೆ